KATK900005432019

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು

**ಎಸ್.ಸಿ.ಸಂಖ್ಯೆಃ 10039/2019**

**ಪ್ರಮಾಣೀಕರಿಸಿದ ದಿನಾಂಕಃ 20-09-2024**
**ಚಾ.ಸಾ-9**
**ಫಿರ್ಯಾ.ಸಾ-6**

| | |
|---|---|
| ಹೆಸರು | ಈಶ್ವರಪ್ಪ |
| ತಂದೆ ಹೆಸರು | ಲೇಟ್ ರುದ್ರಪ್ಪ |
| ವಯಸ್ಸು | 58 ವರ್ಷ |
| ಉದ್ಯೋಗ | ವೆಲ್ಡಿಂಗ್ ಕೆಲಸ |
| ವಾಸಸ್ಥಳ | ತಂಡಗ ಗ್ರಾಮ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-7 ಕರಿಯಪ್ಪ ಮತ್ತು ಚಾಸಾ-8 ಭೈರಪ್ಪ ನನಗೆ ಗೊತ್ತು. ಚಾಸಾ-1 ಸುಮಾ ಗೊತ್ತು. ಮೃತ ಸುರೇಶ್ ನನಗೆ ಗೊತ್ತು. ಅವರು ಸುಮಾರು ಮೂರು ನಾಲ್ಕು ವರ್ಷಗಳ ಹಿಂದೆ ರಾಮಮಂದಿರದ ಬಳಿ ಕೊಲೆಯಾಗಿದ್ದ. ಪೊಲೀಸ್ ನವರು ರಾಮಮಂದಿರದ ಹತ್ತಿರ ಕೊಲೆಯಾದ ಎಂಟು ಹತ್ತು ದಿನಗಳ ನಂತರ ಬಂದಿದ್ರು. ನಾನು, ಭೈರಪ್ಪ ಮತ್ತು ಕರಿಯಪ್ಪ ಇದ್ವಿ, ಪೊಲೀಸ್ ನವರು ಸಹಿ ಮಾಡಿ ಅಂದ್ರು. ನಾವು ಮಾಡಲ್ಲ ಅಂದ್ವಿ ಅದಕ್ಕೆ ಏನು ಆಗಲ್ಲ ಸಹಿ ಮಾಡಿ ಅಂದ್ರು. ನಾನು ಸಹಿ ಮಾಡಿದೆ. ಈ ಸಹಿಗಳು ನನ್ನವೇ. (ಸಾಕ್ಷಿ ಮು.ಮಾಲು-5 ಮತ್ತು 6 ರ ಮೇಲಿರುವ ಚೀಟಿಗಳ ಮೇಲಿನ ಸಹಿಗಳನ್ನು ಗುರುತಿಸಿದ್ದು ಮು.ಮಾಲು-5(ಸಿ) ಮತ್ತು 6(ಸಿ) ಎಂದು ಗುರುತಿಸಲಾಯಿತು). ಸದರಿ ಚೀಟಿಗಳ ಮೇಲೆ ಸಹಿಗಳನ್ನು ಆ ಸ್ಥಳದಲ್ಲೇ ಮಾಡಿದ್ದು. ಯಾವ ಕಾರಣಕ್ಕೆ ಪೊಲೀಸ್ ನವರು ಸಹಿಗಳನ್ನು ಪಡೆದರು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 17.02.2019 ರಂದು ತಂಡಗ ಗ್ರಾಮದ ಶ್ರೀರಾಮಮಂದಿರ ದೇವಸ್ಥಾನದ ಬಳಿ ಗಜೇಂದ್ರರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸ್ ನವರು ಬಂದು ಮಹಜರು ಮಾಡಿದರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ. ಪೋಲಿಸ್ ನವರು ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣು ಮು.ಮಾಲು-5 ಮತ್ತು 6 ನ್ನು ಎರಡು ಪ್ರತ್ಯೇಕ ಡಬ್ಬಿಗಳಲ್ಲಿ ಶೇಖರಿಸಿ ಸೀಲುಮಾಡಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಮಹಜರ್ ನ ಅಂಶಗಳನ್ನು ತಿಳಿದುಕೊಂಡು ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತದೇಹವನ್ನು ನಾನು ಸ್ಥಳ ಮಹಜರ್ ಮಾಡುವಾಗ ನೋಡಿದ್ದೆ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**